ಶ್ರೀ ಲಕ್ಷ್ಮೀನರಸಿಂಹಯ್ಯ.—ಅದು ಪ್ರಾರಂಭವಾಗಿದ್ದು ಯಾವಾಗ ? ಯಾರ್ಯಾರು ನಿಲ್ಲಿಸಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ, ನಾವು ಅದನ್ನು ನಿಲ್ಲಿಸಿಲ್ಲ.

ಶ್ರೀ ಆರ್. ಎನ್. ನಾಯಕ್.—ರಾಜಕೀಯಕ್ಕಾಗಿ ರಾಜ್ಯದ ಅಭಿವೃದ್ಧಿಯನ್ನು ನೀವು ಕುಂಠಿತ ಗೊಳಿಸಿದ್ದೀರಿ.

SRI S. BANGARAPPA.—I know the position in which the Hon'ble Minister has been put. It is not that easy for me to answer that question. ಜನರಿಗೆ ಬೆಂಕಿ ಹಚ್ಚಿ ಸಂಪೂರ್ಣವಾಗಿ ಹಾಳುಮಾಡಿದ್ದೀರಿ, ಆ ಕಮಿಟಿಯ ಸದಸ್ಯ–ರುಗಳಿಗೆ ಹಚ್ಚಿಕೊಟ್ಟು ಅವರಲ್ಲಿ ಕೆಲವರು ವಿರೋಧ, ಮಾಡುವ ಹಾಗೆ ಮಾಡಿದ್ದೀರಿ ಅವರಿಂದ ವಿರೋಧ ವರದಿಯನ್ನು ತರಿಸಿಕೊಂಡಿದ್ದೀರಿ, ರಾಜಕೀಯಕ್ಕಾಗಿ ಬೇಡತಿ ಯೋಜನೆಯನ್ನು ಮುಗಿಸಿದ್ದೀರಿ

ಅಧ್ಯಕ್ಷರು.—ಅವರು ಉತ್ತರ ಹೇಳಿದ್ದಾರೆ. If you are not satisfied you give some notice.

SRI S. BANGARAPPA.—The Hon'ble Minister has not become the minister for the first time He was the Minister for Electricity and power earlier also. ಬೇಡತಿ ಯೋಜನೆಯ ವಿಚಾರದಲ್ಲಿ ಅನೇಕ ಸಲ ಪ್ರಸ್ತಾಪ ವಾಗಿದೆ. ಅನೇಕ ವರ್ಷಗಳ ಕಾಲ ಅವರು ಮಂತ್ರಿಗಳಾಗಿದ್ದರು ಅವರು ಇದನ್ನು ಸ್ಪಷ್ಟ ಮಾಡಿರಲೇಬೇಕು.

ಅಧ್ಯಕ್ಷರು.—ಅಭ್ಯಾಸಮಾಡುತ್ತೇವೆಂದು ಹೇಳಿದ್ದಾರೆ. ನಾನೇನು ಮಾಡಲಿ.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ವರ್ಷಗಳಾಯಿತು ರಿಪೋರ್ಟ್ ಬಂದು ? ಅಲ್ಲಿ ಹೋಗಿ ಸಾರ್ವಜನಿಕರಿಗೆ ಬೆಂಕಿ ಹಚ್ಚುವುದು.....

ಅಧ್ಯಕ್ಷರು.—ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಇದು ಯಾರದೋ ಮುಲಾಜಿಗೆ ಉತ್ತರ ಕೊಡುವ ರೀತಿಯಾಗಿದೆ. ಅಸೆಂಬ್ಲಿಯಲ್ಲಿ ಪ್ರಶ್ನೆ ಕೇಳುವುದು ಇವರಿಂದ ಈ ರೀತಿ ಉತ್ತರ ತೆಗೆದುಕೊಳ್ಳುವುದು ಇದೇ ನಮಗೆ ಕೆಲಸವಾಗಿದೆ.

ಅಧ್ಯಕ್ಷರು.—ಮಂತ್ರಿಗಳು ಮಂಪೊವೆ್ಮ ಇದರ ಬಗ್ಗೆ ಹೇಳಲಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇದಕ್ಕೆ ಸರ್ಕಾರ ೮–೯ ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದೆ. ಅವರೇ ನಿಲ್ಲಿಸಿದ್ದಾರೆ. ನಮ್ಮ ಕಾಲದಲ್ಲಿ ನಿಂತಿದ್ದಲ್ಲಾ ಆದರೆ ನಾವು ಇದನ್ನು ಪ್ರಾರಂಭ ಮಾಡಿಲ್ಲ. ಈ ಕೆಲಸ ಹಿಂದೆಯೇ ನಿಂತಿದೆ,

ಶ್ರೀ ಎಸ್. ಬಂಗಾರಪ್ಪ.—ಹಿಂಗೆ ನಿಂತಿಲ್ಲ. ಹಿಂದೆ ಸರ್ವೆ ಮಾಡಿ, ಎಲ್ಲಾ ಕಂಪ್ಲೀಟ್ ಆಗಿತ್ತು ಈ ಯೋಜನೆಯಲ್ಲ ರೆಡಿ ಆಯಿತು. ಕೊನೆರಲ್ಲಿ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂತು ಇದು ಯಾರಿಗೆ ಗೊತ್ತಿಲ್ಲ ? ಬೇಕಾದರೆ ಫೈಲ್‌ಗಾಂ ತೆಗೆನುನೋಡಿ.

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ಇದನ್ನು ಹಾಕಿ.

ಶ್ರೀ ಎಸ್. ಬಂಗಾರಪ್ಪ,—ಯಾವಾಗ ಚರ್ಚೆಗೆ ಅವಕಾಶ ಕೊಡುತ್ತೀರಿ ?

ಅಧ್ಯಕ್ಷರು.—ಮುಂಗಳವಾರ ಅವಕಾಶ ಕೊಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಸಚಿವರು).—ಲಿಖಿತಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸದನದ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಲಿಖಿತಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯಮುಂದಿಡಲಾಯಿತು.